ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ 2

ಐದನೆಯ ಪದ್ಯ 2

ಕ್ಷೀರವಾರಿಧಿಶಯನ 2

ಶಾಂತಾಕಾರ 3

ವಿವಿಧವಿಹಾರ 4

ಗೋಪೀಜಾರ 7

ನವನೀತಚೋರ 8

ಚಕ್ರಾಧಾರ 9

ಭವದೂರ 11

ಮಾರಪಿತ 12

ಗುಣಹಾರ 13

ಸರಸಾಗಾರ 13

ರಿಪುಸಂಹಾರ 16

ತುಂಬುರುನಾರದಪ್ರಿಯ 17

ವರದ 17

# ವಿಶ್ವನಂದಿನಿ ಲೇಖನಮಾಲೆ — 30

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಐದನೆಯ ಪದ್ಯ

ಕ್ಷೀರವಾರಿಶಯನ ಶಾಂತಾ-
ಕಾರ ವಿವಿಧವಿಹಾರ ಗೋಪೀ-
ಜಾರ ನವನೀತಚೋರ ಚಕ್ರಾಧಾರ ಭವದೂರ |
ಮಾರಪಿತ ಗುಣಹಾರ ಸರಸಾ-
ಗಾರ ರಿಪುಸಂಹಾರ ತುಂಬುರು-
ನಾರದಪ್ರಿಯ ವರದ ರಕ್ಷಿಸು ನಮ್ಮನನವರತ || ೫ ||

## ಕ್ಷೀರವಾರಿಧಿಶಯನ

ಹಾಲಿನ ಸಮುದ್ರದಲ್ಲಿ ಮಲಗಿದವನು. ಭಗವಂತ ಮುಕ್ತರೊಡನೆ ವಿಹರಿಸುತ್ತ ಸನ್ನಿಹಿತನಾಗಿರುವ ಸ್ಥಾನಗಳು ಮೂರು. ಶ್ವೇತದ್ವೀಪ ಅನಂತಾಸನ ವೈಕುಂಠ. ವೈಕುಂಠ ಸತ್ಯಲೋಕಕ್ಕೆ ಸಮೀಪದಲ್ಲಿದೆ. ಅನಂತಾಸನ ಸ್ವರ್ಗಲೋಕದ

ಬಳಿಯಲ್ಲಿದೆ. ಶ್ವೇತದ್ವೀಪ ಭೂಮಿಯ ಮೇಲ್ಮೈಗೆ ನೇರವಾಗಿದೆ. ಶ್ವೇತದ್ವೀಪ ಎಂಬ ಹೆಸರೇ ಸೂಚಿಸುವಂತೆ ಅದು ಸಮುದ್ರದಿಂದ ಸುತ್ತುವರೆಯಲ್ಪಟ್ಟಿದೆ. ಆ ಸಮುದ್ರ ನೀರಿನ ಸಮುದ್ರವಲ್ಲ. ಎಂದೆಂದಿಗೂ ವಿಕಾರವಾಗದ ದಿವ್ಯವಾದ ಹಾಲಿನ ಸಮುದ್ರ. ಅದಕ್ಕೂ ಅಭಿಮಾನಿಯಾದವನು ವರುಣ. ಆ ಸಮುದ್ರದ ಮಧ್ಯದಲ್ಲಿರುವ ಶ್ವೇತದ್ವೀಪದಲ್ಲಿ ಶೇಷಶಯನನಾಗಿ ವಿರಾಜಮಾನನಾಗಿದ್ದಾನೆ. ಭೂಮಿಯಲ್ಲಿ ಅವತರಿಸುವ ಪ್ರತಿಯೊಂದು ರೂಪಕ್ಕೂ ಇದೇ ಮೂಲರೂಪ. ಎಲ್ಲ ಅವತಾರರೂಪಗಳೂ ಇಲ್ಲಿಂದಲೇ ಹೊರಟು ಭೂಮಿಯಲ್ಲಿ ಆವಿರ್ಭೂತವಾಗುತ್ತವೆ.

## ಶಾಂತಾಕಾರ

ಪರಮಾತ್ಮನ ಯಾವ ರೂಪವೂ ಘೋರವಲ್ಲ. ಪರಮಪ್ರಶಾಂತವಾದದ್ದು. ಆದರೆ ಅದನ್ನು ನೋಡುವ ಜನರ ಯೋಗ್ಯತೆಯಂತೆ ಅದು ಕಾಣಿಸಿಕೊಳ್ಳುತ್ತದೆ. ನರಸಿಂಹರೂಪ

ಹಿರಣ್ಯಕಶಿಪುವಿಗೆ ಭಯಂಕರವಾಗಿ ಮಹಾಭೂತದಂತೆ ಕಂಡರೆ ಪ್ರಹ್ಲಾದನಿಗೆ ಕಾರುಣ್ಯದ ಮೂರ್ತಿಯಾಗಿ ತೋರುತ್ತದೆ. ಪರಮಸುಂದರವಾದ ವೇದವ್ಯಾಸರೂಪವೂ ಪೂರ್ಣವಾದ ಭಕ್ತಿ ಮತ್ತು ಸರಿಯಾದ ಜ್ಞಾನವಿಲ್ಲದ ಕಾರಣಕ್ಕಾಗಿ ಅಂಬಿಕೆಗೆ ಘೋರವಾಗಿ ಕಂಡಿತು. ಆದರೆ, ಭಕ್ತಿಯಿಂದ ಭಜಿಸುವ ಜನರಿಗೆ ಪರಮಾತ್ಮನ ಆಕಾರ, ಅರ್ಥಾತ್ ರೂಪ ಎಷ್ಟು ಶಾಂತವಾಗಿ ಕಾಣುತ್ತದೆ ಎಂದರೆ ಅದನ್ನು ಕಂಡಾಕ್ಷಣವೇ ಅನಂತಾನಂತಜನ್ಮಗಳ ಬೇಗೆಯಲ್ಲವೂ ವಿನಾಶವಾಗಿಬಿಡುತ್ತದೆ. ಹೀಗಾಗಿ ಪ್ರಶಾಂತವಾದ, ಶಾಂತಿಯನ್ನು ಅರ್ಥಾತ್ ಮೋಕ್ಷವನ್ನು ನೀಡುವ ರೂಪವುಳ್ಳ ಪರಮಾತ್ಮ ಶಾಂತಾಕಾರ ಎಂದು ಕರೆಸಿಕೊಳ್ಳುತ್ತಾನೆ.

## ವಿವಿಧವಿಹಾರ

ಕ್ಷೀರವಾರಿಶಯನನ್ನಾಗಿ ಶಾಂತಾಕಾರನನ್ನಾಗಿ ಭಗವಂತನನ್ನು ನೆನೆಯುತ್ತಿರುವ ದಾಸರಿಗೆ ಥಟ್ಟನೇ ನೆನಪಿಗೆ ಬರುತ್ತಿರುವದು ಆ

ಶ್ವೇತದ್ವೀಪಾದಿ ಮುಕ್ತಸ್ಥಾನದಲ್ಲಿ ಭಗವಂತ ಮುಕ್ತರ ಜತೆಯಲ್ಲಿ ವಿಹರಿಸುವ ರೀತಿ. ಮುಕ್ತರಾದ ಜೀವರಾಶಿಗಳ ಜತೆಯಲ್ಲಿ ಶ್ರೀಹರಿ ವಿಧವಿಧವಾಗಿ ಕ್ರೀಡಿಸುತ್ತಾನೆ. ಸೃಷ್ಟಿಯ ಆರಂಭದಲ್ಲಿಯೇ ಶ್ವೇತದ್ವೀಪಕ್ಕೆ ಆಗಮಿಸುವ ಹಿಂದಿನ ಸೃಷ್ಟಿಕಾಲದಲ್ಲಿಯೇ ಲಿಂಗಭಂಗವನ್ನು ಮಾಡಿಕೊಂಡು ಮುಕ್ತರಾದ ಜೀವರಾಶಿಗಳ ಸಂಗಡ ಸ್ವಯಂ ತಾನೇ ಆಟವಾಡಿ ಅವರಿಗೆ ಅನಂತಾನಂದವನ್ನು ಅನುಭವಿಸುವ ಸೌಭಾಗ್ಯವನ್ನು ನೀಡುತ್ತಾನೆ. ಅವರವರ ಯೋಗ್ಯತೆಗೆ ತಕ್ಕ ಹಾಗೆ ರೂಪಗಳನ್ನು ಸ್ವೀಕರಿಸಿ ದೇವತೆಗಳ ಸಂಗಡ ಅನೇಕ ರೂಪಗಳಿಂದ ಬ್ರಹ್ಮದೇವರ ಜತೆಯಲ್ಲಿ ಅನಂತರೂಪಗಳಿಂದ ಪರಮಾತ್ಮ ಕ್ರೀಡಿಸುತ್ತಾನೆ. ನೀರಿನಲ್ಲಿ ಈಜಾಡುತ್ತಾ, ಭೂಮಿಯಲ್ಲಿ ಓಡಾಡುತ್ತಾ, ಆಕಾಶದಲ್ಲಿ ಹಾರಾಡುತ್ತಾ ಭಕ್ತರು ಅಪೇಕ್ಷಿಸುವ ರೂಪಗಳನ್ನು ಕೊಂಡು ಭಗವಂತ ಅವರ ಜತೆಯಲ್ಲಿ ಕ್ರೀಡೆ ಮಾಡಿ ತೋರಿಸುತ್ತಾನೆ. ಶ್ರಮವಿಲ್ಲದ,

ದುಃಖವಿಲ್ಲದ, ಸೋಲಿಲ್ಲದ, ಕಡೆಯಿಲ್ಲದ ಅದ್ಭುತವಾದ ವಿಹಾರಗಳು.

ಕೇವಲ ಮುಕ್ತರಿಗಷ್ಟೇ ಅಲ್ಲ. ಸಂಸಾರಿಗಳಾದ ಭಕ್ತರ ಜತೆಯಲ್ಲಿಯೂ ಭಗವಂತ ವಿಹರಿಸುತ್ತಾನೆ ಎಂದು ಸ್ಮರಿಸಲು ಮುಂದಿನ ಎರಡು ಶಬ್ದಗಳು. ಇಷ್ಟೆ, ಸಂಸಾರದಲ್ಲಿ ಆಟಕ್ಕೆ ಕೊನೆಯುಂಟು, ಪ್ರಾಕೃತದೇಹವನ್ನು ಹೊತ್ತ ಭಕ್ತರು ಅನೇಕ ಬಾರಿ ಬಳಲುವದೂ ಉಂಟು, ಅಜ್ಞಾನವಿದ್ದ ಕಾರಣಕ್ಕಾಗಿ ಆಟದಲ್ಲಿ ಭಗವಂತನನ್ನು ಅವಜ್ಞೆ ಮಾಡುವದುಂಟು, ಭಗವಂತ ಮತ್ತು ಭಕ್ತರಿಗೆ ವಿಯೋಗವಾಗುವದೂ ಉಂಟು. ಆದರೆ ಮೋಕ್ಷದಲ್ಲಿ ಹಾಗಿಲ್ಲ. ಎಲ್ಲರೂ ಅಪ್ರಾಕೃತ ಚಿನ್ಮಯ ಶರೀರವನ್ನು ಹೊಂದಿದವರು. ಶ್ರಮ ಅಜ್ಞಾನ ಅವಜ್ಞೆಗಳೂ ಅಲ್ಲಿ ಸುಳಿಯುವದೂ ಸಹಿತ ಇಲ್ಲ. ಭಗವಂತ ಮತ್ತು ಭಕ್ತರಿಗೆ ಕ್ಷಣದ ಅನಂತ ಭಾಗದಲ್ಲಿಯೂ ಸಹಿತ ವಿಯೋಗವುಂಟಾಗುವದಿಲ್ಲ.

# ಗೋಪೀಜಾರ

ಪರಮಾತ್ಮ ಶ್ರೀಕೃಷ್ಣನಾಗಿ ಅವತರಿಸಿ ಬಂದಾಗ ಅವನ ಅಂಗಸಂಗವನ್ನು ಪಡೆಯುವ ಬಯಕೆಯಿಂದ ದೇವಲೋಕದ ಅಪ್ಸರೆಯರು ಗೋಕುಲದಲ್ಲಿ ಗೋಪಿಕಾಸ್ತ್ರೀಯರಾಗಿ ಹುಟ್ಟಿಬಂದಿರುತ್ತಾರೆ. ದ್ವಾರಕೆಯಲ್ಲಿ ಪರಮಾತ್ಮ ಮದುವೆಯಾದ ಹದಿನಾರುಸಾವಿರ ಸ್ತ್ರೀಯರು ಅಗ್ನಿಪುತ್ರರ ಅವತಾರ. ಗೋಕುಲದಲ್ಲಿ ಪರಮಾತ್ಮನ ಅಂಗಸಂಗವನ್ನು ಪಡೆದವರು ಗೋಪಿಕೆಯರಾಗಿ ಹುಟ್ಟಿ ಬಂದಿದ್ದ ಅಪ್ಸರಸೆಯರು. ಈ ಮಾತನ್ನು ಶ್ರೀಮದಾಚಾರ್ಯರು ಸ್ಪಷ್ಟವಾಗಿ ತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತಾರೆ. ಅಪ್ಸರಸ್ತ್ರೀಯರು ಅನಾವೃತರು, ಅರ್ಥಾತ್ ನಿಯತಪತಿಯನ್ನು ಹೊಂದದವರು. ಅದಕ್ಕಾಗಿಯೇ ಅವರಿಗೆ ಪರಪುರುಷನಾದ ಶ್ರೀಕೃಷ್ಣನ ಸಂಪರ್ಕದ ದೋಷವುಂಟಾಗುವದಿಲ್ಲ. ಹೀಗೆ ಗೋಪಿಕೆಯರಾಗಿ ಅವತರಿಸಿ ಬಂದ ಅಪ್ಸರೆಯರಿಗೆ ಜಾರನಾದವನು ಶ್ರೀಕೃಷ್ಣ.

ಯಮುನೆಯ ತೀರದಲ್ಲಿ ಹುಣ್ಣಿಮೆಯ ರಾತ್ರಿಯಲ್ಲಿ ಮರದ ಕೊಂಬೆಯ ಮೇಲೆ ಕುಳಿತು ಕೊಳಲನ್ನು ನುಡಿಸಲಾರಂಭಿಸಿದ ಶ್ರೀಕೃಷ್ಣನ ಬಳಿಗೆ ತಮ್ಮ ಗಂಡ ಮಕ್ಕಳು ಸಂಸಾರ ಎಲ್ಲವನ್ನೂ ತೊರೆದು ಗೋಪಿಕೆಯರು ಧಾವಿಸಿ ಬರುತ್ತಾರೆ. ಆ ಭಗವಂತನನ್ನು ಪರಿಪರಿಯಾಗಿ ಬೇಡಿ ಒಲಿಸಿಕೊಂಡು ಅವನ ಅಂಗಸಂಗವನ್ನು ಪಡೆಯುತ್ತಾರೆ. ಹೀಗೆ ಗೋಪಿಕೆಯರಿಗೆ ಪೂರ್ಣಸುಖವನ್ನು ಕರುಣಿಸಿದ ಕಾರಣಕ್ಕೆ ಶ್ರೀಕೃಷ್ಣ ಗೋಪೀಜಾರನಾಗುತ್ತಾನೆ.

## ನವನೀತಚೋರ

ಪರಮಾತ್ಮ ಯಾವ ಕುಲದಲ್ಲಿ ಯಾವ ವಯಸ್ಸಿನಲ್ಲಿ ಅವತರಿಸಿ ಬರುತ್ತಾನೆಯೋ ಅದಕ್ಕೆ ಅನುಗುಣವಾದ ಲೀಲೆಗಳನ್ನು ತೋರುತ್ತಾನೆ. ವಟುವಿನ ರೂಪದಲ್ಲಿ ಪ್ರಾದುರ್ಭೂತನಾದ ವಾಮನ ಬ್ರಹ್ಮಚರ್ಯಾಶ್ರಮದ ಧರ್ಮವನ್ನು ಪಾಲಿಸಿ ತೋರಿಸಿದ ಹಾಗೆ. ಅದೇ ರೀತಿಯಲ್ಲಿ ದನಗಾಹಿಗಳ ಮನೆಯಲ್ಲಿ ಹುಟ್ಟಿ ಬಂದ ಶ್ರೀಕೃಷ್ಣ

ದನಗಾಹಿಗಳ ಮಕ್ಕಳಂತೆ ಗೋವುಗಳ ಮಧ್ಯದಲ್ಲಿಯೇ ಬೆಳೆಯುತ್ತಾನೆ. ಮಾರಾಟ ಮಾಡಲಿಕ್ಕಾಗಿ ಗೋವಳರು ಎತ್ತಿಟ್ಟಿದ್ದ ಹಾಲು ಮೊಸರು ಬೆಣ್ಣೆಗಳನ್ನು ಕದ್ದು ತಾನು ತಿಂದು ತನ್ನ ಗೆಳೆಯರಿಗೂ ತಿನ್ನಿಸಿ ಕಡೆಗೆ ಬೆಕ್ಕು ಕೋತಿಗಳಿಗೂ ತಿನ್ನಿಸುತ್ತಾ ಭಗವಂತ ತುಂಟಾಟವನ್ನು ತೋರುತ್ತಾನೆ. ನೀತ ಎಂದರೆ ಎತ್ತಲ್ಪಟ್ಟದ್ದು, ತೆಗೆದದ್ದು. ಗಟ್ಟಿಯಾದ ಮೊಸರನ್ನು ಕಡೆದು ಉಂಟಾದ ಮಜ್ಜಿಗೆಯ ಮಧ್ಯದಿಂದ ಬೆಣ್ಣೆಯನ್ನು ಎತ್ತಿ ತೆಗೆಯುತ್ತಾರೆ ಆದ್ದರಿಂದ ಬೆಣ್ಣೆಗೆ ನೀತ ಎಂದು ಹೆಸರು. ಆಗ ತಾನೇ ಕಡೆದು ಎತ್ತಿಟ್ಟ ಬೆಣ್ಣೆ ನವನೀತ. ಹೊಸಬೆಣ್ಣೆ. ಅದನ್ನು ಕದ್ದವನು ನವನೀತಚೋರ.

## ಚಕ್ರಾಧಾರ

ಪರಮಾತ್ಮನ ಆಯುಧ ಸುದರ್ಶನ ಚಕ್ರ. ಕಾಮ ಇದಕ್ಕೆ ಅಭಿಮಾನಿ ದೇವತೆ. ಪರಮಾತ್ಮ ಈ ಸುದರ್ಶನ ಚಕ್ರವನ್ನು ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಕೈಗಳಲ್ಲಿ ಧರಿಸಿದ್ದಾನೆ. ಆ ಚಕ್ರಕ್ಕೆ

ಅದರ ಅಭಿಮಾನಿಯಾದ ಕಾಮನಿಗೆ, ಅವನ ನಿಯಾಮಕನಾದ ವಾಯುವಿಗೆ, ಚಕ್ರದ ರೂಪದ ಲಕ್ಷ್ಮೀದೇವಿಗೆ ಆಧಾರನಾದವನು ಆಶ್ರಯನಾದವನು ಶ್ರೀಹರಿ. ಇಲ್ಲಿ ಶ್ರೀಕೃಷ್ಣನನ್ನು ಚಕ್ರಾಧಾರ ಎಂದು ಸ್ತುತಿಸಲಿಕ್ಕೆ ವಿಶೇಷವಾದ ಕಾರಣವಿದೆ. ಪರಮಾತ್ಮ ನರಸಿಂಹನಾಗಿ ಬಂದಾಗ ತನ್ನ ಉಗುರುಗಳನ್ನೇ ಆಯುಧವನ್ನಾಗಿ ಬಳಸಿದ. ಪರಶುರಾಮನಾದಾಗ ಕೊಡಲಿಯನ್ನು ಆಯುಧವನ್ನಾಗಿ ಬಳಸಿದ. ರಾಮನಾದಾಗ ಕೋದಂಡಪಾಣಿಯಾದ. ಶ್ರೀಕೃಷ್ಣನಾದಾಗ ತನ್ನ ಮೂಲರೂಪದ ಆಯುಧಗಳನ್ನೇ ಅರ್ಥಾತ್ ಚಕ್ರ ಶಂಖ ಗದೆಗಳನ್ನೇ ಬಳಸಿದ. ಅದರಲ್ಲಿಯೂ ವಿಶೇಷವಾಗಿ ಚಕ್ರವನ್ನೇ ಬಳಸಿದ. ಶ್ರೀಕೃಷ್ಣ ಕಂಸನನ್ನು ಕೊಂದ ಬಳಿಕ ಅಳಿಯನನ್ನು ಕೊಂದ ಎನ್ನುವ ಕಾರಣಕ್ಕೆ ಜರಾಸಂಧ ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಬರುತ್ತಾನೆ. ಇಡಿಯ ಮಥುರೆಯನ್ನು ಅವನು ಸುತ್ತುವರೆದು ನಿಂತಾಗ ಮಥುರೆಯ ಉತ್ತರದ ಬಾಗಿಲಿನಿಂದ ಅಣ್ಣನೊಡಗೂಡಿ ಶ್ರೀಕೃಷ್ಣ ಜರಾಸಂಧನಿಗೆ ಎದುರಾಗಿ ನಿಲ್ಲುತ್ತಾನೆ. ಯುದ್ಧಕ್ಕೆ

ಸನ್ನದ್ಧನಾಗಿ ನಿಂತಾಗ ತನ್ನೆಲ್ಲ ಆಯುಧಗಳನ್ನು ಅದರ ಅಭಿಮಾನಿದೇವತೆಗಳನ್ನು ನೆನೆಯುತ್ತಾನೆ. ಆಗ ಅವೆಲ್ಲವೂ ಭುವಿಗಿಳಿದು ಬರುತ್ತವೆ. ಶ್ರೀಕೃಷ್ಣ ಅವುಗಳನ್ನು ಸ್ವೀಕರಿಸಿ ಜರಾಸಂಧಾದಿಗಳನ್ನು ಹೊಡೆದೋಡಿಸುತ್ತಾನೆ.

## ಭವದೂರ

ಭವ ಎಂದರೆ ಸಂಸಾರ. ಪರಮಾತ್ಮನಿಗೆ ಸಂಸಾರದ ಕಾಟವಿಲ್ಲವಾದ್ದರಿಂದ ಅವನನ್ನು ಭವದೂರ ಎಂದು ಕರೆಯುತ್ತಾರೆ. ಪ್ರಕೃತಿ, ಅವಿದ್ಯಾ, ಕರ್ಮ, ಕಾಮ ಲಿಂಗದೇಹಗಳ ಬಂಧನವನ್ನೇ ಸಂಸಾರ ಎಂದು ಕರೆಯುವದು. ಇವುಗಳ ಬಂಧನಕ್ಕೆ ಜೀವ ಸಿಲುಕಿದಾಗ ಅವನ ಸ್ವರೂಪವು ಆಚ್ಛಾದಿತವಾಗಿ ಜ್ಞಾನ ಆನಂದಗಳು ತಿರೋಹಿತವಾಗಿ ಪಾಂಚಭೌತಿಕಶರೀರವನ್ನು ಪಡೆದು ದುಃಖ ಅಜ್ಞಾನಗಳಿಂದ ನೋವನ್ನನುಭವಿಸಬೇಕಾಗುತ್ತದೆ. ಪರಮಾತ್ಮನಿಗೆ ಮತ್ತು ಮಹಾಲಕ್ಷ್ಮೀದೇವಿಗೆ ಎಂದಿಗೂ ಈ ಭವದ

ಬಂಧನವಿಲ್ಲ. ಅವನ ನಾಮಸ್ಮರಣೆಯ ಭವಬಂಧನವನ್ನು ಕಳಚಿಬಿಡುತ್ತದೆ.

> **“ಯಸ್ಯ ಸ್ಮರಣಮಾತ್ರೇಣ**
> **ಜನ್ಮಸಂಸಾರಬಂಧನಾತ್ |**
> **ವಿಮುಚ್ಯತೇ ನಮಸ್ತಸ್ಮೈ**
> **ವಿಷ್ಣವೇ ಪ್ರಭವಿಷ್ಣವೇ ”**

ಎಂಬ ಮಾತು ಮಹಾಭಾರತದಲ್ಲಿದೆ.

## ಮಾರಪಿತ

: ಸಾಯುವಾಗ ಅನುಭವಿಸುವಂಥಹ ಒದ್ದಾಟವನ್ನು ಮನುಷ್ಯ ಕಾಮಾವಿಷ್ಟನಾದಾಗ, ಪ್ರೇಮದ ಬಲೆಗೆ ಬಿದ್ದಾಗ ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ ಅನುಭವಿಸುತ್ತಾನೆ. ಹೀಗೆ ಪ್ರಾಣ ತೆಗೆಯದೇ ಕೊಲ್ಲುತ್ತಾನೆ ಆದ್ದರಿಂದ ಮನ್ಮಥನಿಗೆ ಮಾರ ಎಂದು ಹೆಸರು. “ಮದನೋ ಮನ್ಮಥೋ ಮಾರಃ”. ಅವನನ್ನು ಹಡೆದವನು ಭಗವಂತ ಆದ್ದರಿಂದ ಅವನು ಮಾರಪಿತ.

## ಗುಣಹಾರ

ಶಾಸ್ತ್ರಗಳಲ್ಲಿ ಸತ್ವ ರಜಸ್ ತಮೋಗುಣಗಳನ್ನೂ ಗುಣ ಎಂದು ಕರೆಯುತ್ತಾರೆ, ಜ್ಞಾನ, ಆನಂದ, ಶಕ್ತಿ, ಕಾರುಣ್ಯ, ಪ್ರಾಗಲ್ಭ್ಯ, ಔದಾರ್ಯ ಮುಂತಾದವುಗಳನ್ನೂ ಗುಣ ಎಂದು ಕರೆಯುತ್ತಾರೆ. ಸತ್ವಾದಿಗಳು ಎಂಬ ಅರ್ಥದಲ್ಲಿ ಪರಮಾತ್ಮ ನಿರ್ಗುಣ. ಕಾರಣ ಆ ಮೂರುಗುಣಗಳ ಪ್ರಭಾವ ಅವನ ಮೇಲಿಲ್ಲ. ಜ್ಞಾನಾದಿಮಂಗಳಗುಣಗಳು ಎಂಬ ಅರ್ಥದಲ್ಲಿ ಅವನು ಗುಣಹಾರ. ಅವನ ಗುಣಗಳ ಮಾಲೆಗೆ ಕೊನೆಯೇ ಇಲ್ಲ. ಅನಂತ ಸದ್ಗುಣಗಳ ಸ್ವರೂಪ ಶ್ರೀಮನ್ನಾರಾಯಣ.

## ಸರಸಾಗಾರ

ಸರಸ ಎಂಬ ಕನ್ನಡದ ಶಬ್ಕಕ್ಕೆ ಎಂದರೆ ಸೊಬಗು, ವಿನೋದ ಎಂದೆಲ್ಲ ಅರ್ಥಗಳಿವೆ. ಸರಸಗಾರ ಎಂದರೆ ಸೊಬಗುಗಾರ, ವಿನೋದಪ್ರವೃತ್ತಿಯವನು, ರಸಿಕ ಎಂದರ್ಥ. ಸರಸಗಾರ ಎಂಬ ಶಬ್ದವನ್ನೇ

ಸರಸಾಗಾರ ಎಂದು ಛಂದಸ್ಸಿಗೆ ಅನುಗುಣವಾಗಿ ದಾಸರು ಬಳಸಿದ್ದಾರೆ. ಭೂಮಿ ನೀರು ಬೆಂಕಿ ಗಾಳಿ ಆಕಾಶ ಎಂಬ ಐದೇ ಐದು ಪದಾರ್ಥಗಳನ್ನು ಬಳಸಿ ಅನಂತ ವೈವಿಧ್ಯದ ಪದಾರ್ಥಗಳನ್ನು ಕಣ್ಮನ ಸೂರೆಗೊಳ್ಳುವಂಥಹ ಅದ್ಭುತಪ್ರಪಂಚವನ್ನು ಸೃಷ್ಟಿಸಿದ ಶ್ರೀಹರಿ ಸೊಬಗುಗಾರನಲ್ಲದೇ ಮತ್ತೇನು ? ಹದಿನಾರು ಸಾವಿರ ಸುಂದರಿಯರನ್ನು ಮದುವೆಯಾಗಿ ಅವರನ್ನು ವಿಧವಿಧವಾಗಿ ರಂಜಿಸಿ, ದ್ವಾರಕೆಯ ಮಧ್ಯದಲ್ಲಿ ಕಲ್ಲು ಮಣ್ಣಿನದಲ್ಲ, ಬಂಗಾರದ ನಗರಿಯನ್ನು ಕಟ್ಟಿ, ರುಕ್ಮಿಣೀ ಸತ್ಯಭಾಮೆಯರೊಂದಿಗೆ, ಷಣ್ಮಮಹಿಷಿಯರೊಂದಿಗೆ ಅದ್ಬುತವಾದ ಬಾಳ್ವೆಯನ್ನು ಬಾಳಿದ ಶ್ರೀಕೃಷ್ಣನಲ್ಲವೇ ಸೊಗಸುಗಾರ ? ಹಕ್ಕಿಯನ್ನು ವಾಹನವನ್ನಾಗಿ ಮಾಡಿಕೊಂಡು, ಹಾವನ್ನು ಹಾಸಿಗೆಯನ್ನಾಗಿ ಮಾಡಿಕೊಂಡು, ಶಂಕರನನ್ನು ಕಿಂಕರನನ್ನಾಗಿಸಿ, ನಾಭಿಯಲ್ಲಿ ಹುಟ್ಟಿದ ಪದ್ಮದಲ್ಲಿ ಬ್ರಹ್ಮದೇವರನ್ನು ಪಡೆದು, ಸಕಲಸೌಭಾಗ್ಯದೇವತೆಯಾದ

ಲಕ್ಷ್ಮೀದೇವಿಯಿಂದ ಕಾಲೊತ್ತಿಸಿಕೊಳ್ಳುವ ಶ್ರೀಹರಿಯಲ್ಲದೇ ಮತ್ತಾರು ಸೊಗಸುಗಾರರಾದವರು ? ಬ್ರಹ್ಮದೇವರು ಧ್ಯಾನದಲ್ಲಿ ಮಗ್ನರು. ಪ್ರಾಣದೇವರು ಜಗತ್ತಿಗೆ ಉಸಿರಾಟ ನೀಡುವ ಕಾಯಕದಲ್ಲಿ ನಿರತರು. ಪರಶಿವ ಸಮುದ್ರದೊಳಗೆ ತಪಸ್ಸಿನಲ್ಲಿ ತಲ್ಲೀನ. ಬೆಳೆಗ್ಗೆ ಉದಯಿಸಿ ಸಂಜೆ ಅಸ್ತಮಿಸುವ ವಿರಾಮವಿಲ್ಲದ ಕಾಯಕದಲ್ಲಿ ಸೂರ್ಯ. ಸಕಲರ ಪುಣ್ಯಪಾಪಗಳ ಲೆಕ್ಕವಿಟ್ಟು ಶಿಕ್ಷೆ ನೀಡುವದರಲ್ಲಿ ಯಮಧರ್ಮ. ಬೆಳೆ ಬೆಳೆದು ಸಕಲರ ಹೊರೆಯುವದರಲ್ಲಿ ಭೂಮಿತಾಯಿ. ಹೀಗೆ ಪ್ರತಿಯೊಬ್ಬರೂ ಭವವನ್ನು ನೀಗಿಸಿಕೊಳ್ಳುವ ಪರಿಪೂರ್ಣಾನಂದವನ್ನು ತಂದೀಯುವ ಕಾರ್ಯದಲ್ಲಿ ನಿಮಗ್ನರೇ. ಆ ಪರಮಾತ್ಮ ಮಾತ್ರ ಎಂದಿಗೂ ಆನಂದಕ್ಕಾಗಿ ಕೆಲಸ ಮಾಡಬೇಕಾಗಿಲ್ಲ. ಅವನು ಸೊಗಸುಗಾರ. ಅನಂತ ಆನಂದವನ್ನು ಅನುಭವಿಸುವದೊಂದೇ ಅವನ ಕಾಯಕ.

ಕೆಲವು ಕಡೆಯಲ್ಲಿ ಸರಸಾಕಾರ ಎಂಬ ಪಾಠವೂ ಇದೆ. ಆಗ ಆನಂದಪೂರ್ಣವಾದ ಶರೀರವನ್ನು ಹೊಂದಿದವನು ಎಂಬ ಅರ್ಥವನ್ನು ತಿಳಿಯಬೇಕು.

## ರಿಪುಸಂಹಾರ

ರಿಪುಗಳಿಗೆ ಶತ್ರುಗಳಿಗೆ ಸಂಹಾರವನ್ನು ನೀಡುವವನು ಅರ್ಥಾತ್ ಅವರನ್ನು ಕೊಲ್ಲುವವನು ರಿಪುಸಂಹಾರ. ಮತ್ಸ್ಯರೂಪದಿಂದ ವೇದಚೋರರರನ್ನು, ವರಾಹರೂಪದಿಂದ ಹಿರಣ್ಯಾಕ್ಷನನ್ನು, ನರಸಿಂಹನಾಗಿ ಹಿರಣ್ಯಕಶಿಪುವನ್ನು, ಪರಶುರಾಮನಾಗಿ ದುಷ್ಟಕ್ಷತ್ರಿಯರನ್ನು, ಶ್ರೀರಾಮನಾಗಿ ರಾವಣನನ್ನು, ಶ್ರೀಕೃಷ್ಣನಾಗಿ ಕಂಸ, ಸಾಲ್ವ, ಶಿಶುಪಾಲಾದಿಗಳನ್ನು, ಕಲ್ಕಿಯಾಗಿ ದುಷ್ಟದಸ್ಯುಗಳನ್ನು, ವೇದವ್ಯಾಸನಾಗಿ ಕಲ್ಯಾದ್ಯಸುರರರನ್ನು, ಭೀಮನಲ್ಲಿ ನಿಂತು ಜರಾಸಂಧನನ್ನು, ಅರ್ಜುನನಲ್ಲಿ ನಿಂತು ನಿವಾತಕವಚರನ್ನು ಕೊಂದವನು ಭಗವಂತ.

## ತುಂಬುರುನಾರದಪ್ರಿಯ

ತುಂಬುರು ಒಬ್ಬ ಗಂಧರ್ವ. ನಾರದರು ತಾತ್ವಿಕದೇವತೆಗಳ ಮಧ್ಯದಲ್ಲಿ ಸ್ಥಾನವನ್ನು ಪಡೆದ ಶ್ರೇಷ್ಠ ಋಷಿಗಳು, ದೇವರ್ಷಿಗಳು. ಇಬ್ಬರೂ ಜತೆಜತೆಯಲ್ಲಿಯೇ ಇದ್ದು ಭಗವಂತನನ್ನು ನಿರಂತರವಾಗಿ ಸ್ತೋತ್ರಮಾಡುತ್ತಿರುತ್ತಾರೆ. ಭಗವನ್ನಾಮಸ್ಮರಣವ್ರತವನ್ನು ಉಸಿರಿನಂತೆ ಪಾಲಿಸುವ ಮಹಾನುಭಾವರು. ಅವರಿಗೆ ಉಳಿದೆಲ್ಲ ಪದಾರ್ಥಗಳಿಗಿಂತಲೂ ಅತ್ಯಂತ ಮಿಗಿಲಾಗಿ ಪ್ರಿಯನಾದವನು ಶ್ರೀಹರಿ.

## ವರದ

ವರವನ್ನು ನೀಡುವವನು. ಬ್ರಹ್ಮದೇವರೂ ವರವನ್ನು ನೀಡುತ್ತಾರೆ. ರುದ್ರದೇವರೂ ನೀಡುತ್ತಾರೆ. ನೀಡುವ ಶಕ್ತಿ ಸಾಮರ್ಥ್ಯವಿದ್ದ ಯಾರು ಬೇಕಾದರೂ ವರವನ್ನು ನೀಡಬಹುದು. ಆದರೆ ಭಗವಂತ ನೀಡುವ ಹಾಗೆ ಯಾರಿಗೂ ವರವನ್ನು ನೀಡಲು ಸಾಧ್ಯವಿಲ್ಲ. ಮುಂದೆ ಕನಕದಾಸರೇ ಈ ತತ್ವವನ್ನು

ಬಹಳ ಸ್ಪಷ್ಟವಾಗಿ ತಿಳಿಸುತ್ತಾರೆ. (ಶ್ಲೋ. ೪೪, ೫೩) ಇಷ್ಟೆಲ್ಲ ಗುಣದ ಓ ಭಗವಂತ ನಮ್ಮನ್ನು ಎಡೆಬಿಡದೇ ರಕ್ಷಿಸು ॥ ೫ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491